# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಘಟಕ (ಬಿ.ಸಿ.ಎಂ.)

Accredited by NAAC With "A" Grade, 73rd All India Rankings (NIRF) 2019, Four Star KSURF 2019 and secured 45th Place in SCIMAGO Institutional Rankings

ಸಂಖ್ಯೆ.ಕುವಿ/ಬಿಸಿಎಂ-03/ 349 /2020-21 ದಿನಾಂಕ:30-03-2021

## ಸುತ್ತೋಲೆ

**ವಿಷಯ:** ಪಿ.ಹೆಚ್.ಡಿ. ಸಾಮಾನ್ಯ ಸಂಶೋಧನಾ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಶೈಕ್ಷಣಿಕ ಸಾಲಿಗೆ ಅನ್ವಯಿಸುವಂತೆ ಈ ಕೆಳಕಂಡ ಸ್ನಾತಕೋತ್ತರ ವಿಭಾಗಗಳಲ್ಲಿ ಖಾಲಿ ಇರುವ ತಲಾ ಒಂದು ಸ್ಥಾನಕ್ಕೆ ವಿಶ್ವವಿದ್ಯಾಲಯದ ಸಾಮಾನ್ಯ ಕಿರಿಯ ಶಿಷ್ಯವೇತನದ ಆಯ್ಕೆಗಾಗಿ ಅರ್ಹ ಪಿ.ಹೆಚ್.ಡಿ. ಸಂಶೋಧನಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಸ್ನಾತಕೋತ್ತರ ವಿಭಾಗಗಳು |
|---|---|
| 01 | ಕನ್ನಡ |
| 02 | ಇಂಗ್ಲೀಷ್ |
| 03 | ಹಿಂದಿ |
| 04 | ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ |
| 05 | ಅರ್ಥಶಾಸ್ತ್ರ |
| 06 | ರಾಜ್ಯಶಾಸ್ತ್ರ |
| 07 | ಸಮಾಜಶಾಸ್ತ್ರ |
| 08 | ಶಿಕ್ಷಣ ವಿಭಾಗ |
| 09 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ |
| 10 | ಸಮಾಜಕಾರ್ಯ |
| 11 | ಕಂಪ್ಯೂಟರ್ ಸೈನ್ಸ್ |
| 12 | ಗಣಿತಶಾಸ್ತ್ರ |
| 13 | ಎಲೆಕ್ಟ್ರಾನಿಕ್ಸ್ |
| 14 | ಅನ್ವಯಿಕ ಸಸ್ಯಶಾಸ್ತ್ರ |
| 15 | ಅನ್ವಯಿಕ ಪ್ರಾಣಿಶಾಸ್ತ್ರ |
| 16 | ವನ್ಯಜೀವಿ ಮತ್ತು ಸಂರಕ್ಷಣೆ ವಿಭಾಗ |
| 17 | ಸೂಕ್ಷ್ಮಾಣುಜೀವಶಾಸ್ತ್ರ ವಿಭಾಗ |
| 18 | ಜೈವಿಕತಂತ್ರಜ್ಞಾನ |
| 19 | ಪರಿಸರ ವಿಜ್ಞಾನ |
| 20 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ |
| 21 | ರಸಾಯನಶಾಸ್ತ್ರ |
| 22 | ಜೀವರಸಾಯನಶಾಸ್ತ್ರ |
| 23 | ಭೌತಶಾಸ್ತ್ರ |
| 24 | ಔದ್ಯೋಗಿಕ ರಸಾಯನಶಾಸ್ತ್ರ |
| 25 | ಎಂ.ಕಾಂ |
| 26 | ಎಂ.ಬಿ.ಎ/ಹೆಚ್.ಆರ್.ಎಂ. |
| 27 | ಎಂ.ಟಿ.ಎ. (ಪ್ರವಾಸೋದ್ಯಮ) |
| 28 | ಅನ್ವಯಿಕ ಭೂವಿಜ್ಞಾನ |
| 29 | ಎಂ.ಪಿ.ಎಡ್ |
| 30 | ಪ್ರಾಂಶುಪಾಲರು ಸಹ್ಯಾದ್ರಿ ಕಲಾ ಕಾಲೇಜು ಶಿವಮೊಗ್ಗ |

ಮು.ತಿ.ನೋ.

| | |
|---|---|
| 31 | ಪ್ರಾಂಶುಪಾಲರು ಸಹ್ಯಾದ್ರಿ ವಾಣಿಜ್ಯ ಕಾಲೇಜು ಶಿವಮೊಗ್ಗ |
| 32 | ಪ್ರಾಂಶುಪಾಲರು ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ |
| 33 | ನಿರ್ದೇಶಕರು ಸ್ನಾತಕೋತ್ತರ ಕೇಂದ್ರ ಕಡೂರು |
| 34 | ನಿರ್ದೇಶಕರು ಸ್ನಾತಕೋತ್ತರ ಕೇಂದ್ರ ಐ.ಡಿ.ಎಸ್.ಜಿ. ಕಾಲೇಜು ಆವರಣ, ಚಿಕ್ಕಮಗಳೂರು |

**ವಿಶ್ವವಿದ್ಯಾಲಯ ಸಾಮಾನ್ಯ ಸಂಶೋಧನಾ ಕಿರಿಯ ಶಿಷ್ಯವೇತನದ ವಿವರ.**

| ಕ್ರ.ಸಂ. | ವಿಷಯ | ಶಿಷ್ಯವೇತನ | ವಾರ್ಷಿಕ ಅನುಷಂಗಿಕ ವೆಚ್ಚ | |
|---|---|---|---|---|
| | | | ಕಲಾ ಮತ್ತು ವಾಣಿಜ್ಯ | ವಿಜ್ಞಾನ |
| 01 | ವಿಶ್ವವಿದ್ಯಾಲಯ ಸಾಮಾನ್ಯ ಸಂಶೋಧನಾ ಕಿರಿಯ ಶಿಷ್ಯವೇತನದ ಅವಧಿ ಎರಡು ವರ್ಷ ಮಾತ್ರ | ಪ್ರತಿ ಮಾಹೆಯಾನ ರೂ.6,000-00 | ರೂ.4,000-00 | ರೂ.4,500-00 |

**ಪಿ.ಹೆಚ್.ಡಿ. ಸಂಶೋಧನಾ ಸಾಮಾನ್ಯ ಕಿರಿಯ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳು:**

01 ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಗಳಲ್ಲಿ ಕನಿಷ್ಠ ಶೇಕಡ 55 ಅಂಕ ಪಡೆದಿರುವುದಕ್ಕೆ ನಾಲ್ಕು ಸೆಮಿಸ್ಟರ್ ಅಂಕಪಟ್ಟಿಗಳ ಪ್ರತಿಗಳಿಗೆ ಮತ್ತು ಘಟಿಕೋತ್ಸವ ಪ್ರಮಾಣ ಪತ್ರದ ಪ್ರತಿಗೆ ಪಿ.ಹೆಚ್.ಡಿ. ಮಾರ್ಗದರ್ಶಕರು ಮತ್ತು ವಿಭಾಗದ ಮುಖ್ಯಸ್ಥರಿಂದ ದೃಢೀಕರಣದೊಂದಿಗೆ ಸಲ್ಲಿಸಬೇಕು.

02 ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈಗಾಗಲೇ ಪಿ.ಹೆಚ್.ಡಿ. ಸಂಶೋಧನೆಗೆ ತಾತ್ಕಾಲಿಕ ನೋಂದಣಿ ಮಾಡಿಸಿರುವುದಕ್ಕೆ ಪಿ.ಹೆಚ್.ಡಿ. ನೋಂದಣಿ ಅಧಿಸೂಚನೆಯ ಪ್ರತಿಯನ್ನು ಪಿ.ಹೆಚ್.ಡಿ. ಮಾರ್ಗದರ್ಶಕರ ಮತ್ತು ವಿಭಾಗದ ಮುಖ್ಯಸ್ಥರಿಂದ ದೃಢೀಕರಣದೊಂದಿಗೆ ಸಲ್ಲಿಸಬೇಕು.

03 ಅರ್ಜಿ ಸಲ್ಲಿಸುವ ಅಭ್ಯರ್ಥಿಯು ವಿಶ್ವವಿದ್ಯಾಲಯ, ಸರ್ಕಾರದಿಂದ ಯು.ಜಿ.ಸಿ.ಯಿಂದ ಅಥವಾ ಬೇರೆ ಯಾವುದೇ ಆರ್ಥಿಕ ಮೂಲಗಳಿಂದ ಧನ ಸಹಾಯ ಪಡೆದಿಲ್ಲ / ಪಡೆಯುತ್ತಿಲ್ಲವೆಂದು ಹಾಗೂ ಅತಿಥಿ ಉಪನ್ಯಾಸಕ / ಅಂಶಕಾಲಿಕ / ಹಂಗಾಮಿ ಅಧ್ಯಾಪಕ / ಅಧ್ಯಾಪಕೇತರ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿಲ್ಲವೆಂದು ಅಭ್ಯರ್ಥಿಯು ದೃಢೀಕರಣಕ್ಕೆ ಸಹಿಯೊಂದಿಗೆ ಪಿ.ಹೆಚ್.ಡಿ. ಮಾರ್ಗದರ್ಶಕರ ಮತ್ತು ವಿಭಾಗದ ಮುಖ್ಯಸ್ಥರಿಂದ ದೃಢೀಕರಣದೊಂದಿಗೆ ಸಲ್ಲಿಸಬೇಕು.

04 ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಧಾರ್‌ಕಾರ್ಡ್ ಪ್ರತಿಗೆ ಪಿ.ಹೆಚ್.ಡಿ. ಮಾರ್ಗದರ್ಶಕರು ಮತ್ತು ವಿಭಾಗದ ಮುಖ್ಯಸ್ಥರು ದೃಢೀಕರಿಸಿ ಸಲ್ಲಿಸಬೇಕು.

**ಅರ್ಜಿ ಶುಲ್ಕ : ರೂ.100-00 (ರೂಪಾಯಿ ಒಂದುನೂರು ಮಾತ್ರ)**

ಅರ್ಜಿ ಶುಲ್ಕದ ಮೊತ್ತವನ್ನು ಸ್ಟೇಟ್ ಆಫ್ ಇಂಡಿಯಾ (ಎಸ್.ಬಿ.ಐ.) ಜ್ಞಾನಸಹ್ಯಾದ್ರಿ, ಶಾಖೆಯಲ್ಲಿನ ವಿಶ್ವವಿದ್ಯಾಲಯದ ಸಾಮಾನ್ಯ **ಖಾತೆ ಸಂಖ್ಯೆ:54023036291 ಚಲನ್‌ನಲ್ಲಿ** ವಿಶ್ವವಿದ್ಯಾಲಯ ಸಾಮಾನ್ಯ ಸಂಶೋಧನಾ ಕಿರಿಯ ಶಿಷ್ಯವೇತನ ಅರ್ಜಿ ಶುಲ್ಕವೆಂದು ನಮೂದಿಸಿ **ರೂ.100-00 ಗಳನ್ನು** ಜಮಾ ಮಾಡಿ ಮೂಲ ಚಲನ್‌ನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗೆ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿಯನ್ನು ಪಿ.ಹೆಚ್.ಡಿ. ಮಾರ್ಗದರ್ಶಕರು ಮತ್ತು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರ ಮೂಲಕ ಸಂಚಾಲಕರು, ಬಿ.ಸಿ.ಎಂ. ಘಟಕ, ಶಂಕರಘಟ್ಟ - ಇವರಿಗೆ **ದಿನಾಂಕ:09-04-2021 ರೊಳಗಾಗಿ** ಸಲ್ಲಿಸಲು ತಿಳಿಸಲಾಗಿದೆ. (**ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kuvempu.ac.in ನಲ್ಲಿ ನೋಡುವುದು.**)

ಕರಡು ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ

31/3

ಸಂಚಾಲಕರು
**ಸಂಚಾಲಕರು**
**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಘಟಕ**
**ಕುವೆಂಪು ವಿಶ್ವವಿದ್ಯಾಲಯ**
**ಶಂಕರಘಟ್ಟ – 577 451.**

ಗೆ,
ಮೇಲ್ಕಂಡ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಪ್ರಾಂಶುಪಾಲರು
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ / ಶಿವಮೊಗ್ಗ/ ಕಡೂರು / ಚಿಕ್ಕಮಗಳೂರು.

**ಪ್ರತಿಗಳು:**

1) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2) ಆಪ್ತ ಸಹಾಯಕರು : ಮಾನ್ಯ ಕುಲಪತಿಗಳು / ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
3) ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಘಟಕ (ಬಿ.ಸಿ.ಎಂ.)

**Accredited by NAAC With "A" Grade, 73rd All India Rankings (NIRF) 2019, Four Star KSURF 2019 and secured 45th Place in SCIMAGO Institutional Rankings**

ಸಂಖ್ಯೆ.ಕುವಿ/ಬಿಸಿಎಂ-03/ /2020-21 ದಿನಾಂಕ:30-03-2021

## 2021-22 ನೇ ಸಾಲಿನ ಪಿ.ಹೆಚ್.ಡಿ. ಸಂಶೋಧನಾ ಸಾಮಾನ್ಯ ಶಿಷ್ಯವೇತನಕ್ಕೆ ಅರ್ಜಿ

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 3 | ತಂದೆ/ ಗಂಡನ ಹೆಸರು | |
| 4 | ವಿಳಾಸ: ಅ) ಹಾಲಿ ವಿಳಾಸ<br>ದೂರವಾಣಿ ಸಂಖ್ಯೆ: ಮೊಬೈಲ್ ನಂ: | |
| | ಆ) ಖಾಯಂ ವಿಳಾಸ:<br>ದೂರವಾಣಿ ಸಂಖ್ಯೆ: ಮೊಬೈಲ್ ನಂ: | |
| 5 | ಪ್ರವರ್ಗ – (ಪ್ರಮಾಣ ಪತ್ರ ಲಗತ್ತಿಸಬೇಕು) | |
| 6 | ವಿದ್ಯಾರ್ಹತೆ | |

| ಕ್ರ. ಸಂ. | ವಿಶ್ವವಿದ್ಯಾಲಯದಿಂದ ಪಡೆದ ಅಂಕಪಟ್ಟಿಗಳು | ಪಡೆದ ಪದವಿ | ವರ್ಷ | ವಿಷಯ | ಶೇಕಡವಾರು ಅಂಕಗಳು | ದರ್ಜೆ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |

| | | |
|---|---|---|
| 7 | ಸಂಶೋಧನೆಯ ಮಾಹಿತಿ<br>(ಅ) ವಿಭಾಗದ ಹೆಸರು. | |
| | (ಆ) ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯ ಮತ್ತು ಸ್ಥಳ. | |
| | (ಇ) ಮಾರ್ಗದರ್ಶಕರ ಹೆಸರು. | |
| 8 | ಇತರೆ ಯಾವುದಾದರೂ ಸಂಶೋಧನಾ ಶಿಷ್ಯವೇತನ -ವನ್ನು ಪಡೆಯುತ್ತಿದ್ದರೆ ಮಾಹಿತಿ ಹಾಗೂ ಪಡೆಯದೆ ಇದ್ದರೆ ವಿಭಾಗಾಧ್ಯಕ್ಷರಿಂದ ದೃಢೀಕರಣ ಲಗತ್ತಿಸಬೇಕು. | |
| 9 | ಪಿಹೆಚ್.ಡಿ. ನೋಂದಾವಣಿಯ ಪ್ರತಿ ಅಥವಾ ಪ್ರವೇಶಕ್ಕೆ ಭರಿಸಿರುವ ಶುಲ್ಕದ ರಶೀದಿಯ ಜೆರಾಕ್ಸ್ ಪ್ರತಿ, ದಿನಾಂಕ: (ದಾಖಲೆ ಪ್ರತಿ ಲಗತ್ತಿಸುವುದು). | |
| 10 | ಇತರೆ ದಾಖಲೆಗಳು | 1.<br>2.<br>3.<br>4. |

ಪುತಿ.ನೋ.

ನಾನು ಕುವೆಂಪು ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಘಟಕದ ಷರತ್ತು ಮತ್ತು ಕಾಲಕಾಲಕ್ಕೆ ಅನ್ವಯವಾಗುವ ನಿಯಮಗಳಿಗೆ ಬದ್ಧನಾಗಿ ಪೂರ್ಣ ವೇಳೆ ಸಂಶೋಧನಾ ಕಾರ್ಯದಲ್ಲಿ ತೊಡಗಿರುತ್ತೇನೆ ಹಾಗೂ ಇತರೆ ಯಾವುದೇ ಆದಾಯ ಬರುವ ವೃತ್ತಿಯಲ್ಲಿ ತೊಡಗಿರುವುದಿಲ್ಲ. ಈ ಅರ್ಜಿಯಲ್ಲಿ ಭರ್ತಿ ಮಾಡಲಾದ ವಿವರಗಳು: ಒದಗಿಸಿರುವ ಮಾಹಿತಿ: ದಾಖಲೆಗಳು ಸತ್ಯವಾದವುಗಳೆಂದು ಈ ಮೂಲಕ ನಾನು ಪ್ರಮಾಣ ಮಾಡುತ್ತೇನೆ.

ಸ್ಥಳ :

ದಿನಾಂಕ : ವಿದ್ಯಾರ್ಥಿಯ ಸಹಿ

## ಮಾರ್ಗದರ್ಶಕರ ಒಪ್ಪಿಗೆ ಪತ್ರ

ಶ್ರೀ/ಶ್ರೀಮತಿ ---------------------------------------------------- ಇವರಿಗೆ

---------------------------------------------------------------- ವಿಷಯಕ್ಕೆ

ಮಾರ್ಗದರ್ಶನ ಮಾಡಲು ಒಪ್ಪಿಕೊಂಡಿದ್ದೇನೆ ಹಾಗೂ ಸಂಶೋಧನೆಗೆ ಪೂರಕವಾದ ವಿಷಯಗಳಲ್ಲಿ ಸಂಪೂರ್ಣವಾದ ಸಹಕಾರವನ್ನು ನೀಡುತ್ತೇನೆ.

ಸ್ಥಳ :

ದಿನಾಂಕ : ಮಾರ್ಗದರ್ಶಕರ ಸಹಿ

## ದೃಢೀಕರಣ

ವಿಭಾಗದ ಮುಖ್ಯಸ್ಥರ ಸಹಿ ಮೊಹರಿನೊಂದಿಗೆ

**ಸೂಚನೆ:** ಅಪೂರ್ಣವಾದ ಮಾಹಿತಿಗಳನ್ನೊಳಗೊಂಡ ಅರ್ಜಿಗಳನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುವುದು.